ಇಲಾಖೆ / ವಿಷಯ : DEPARTMENT / SUBJECT: ಕೆಪಿಎಸ್‌ಸಿ

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡಪ್ರಭ ದಿನಾಂಕ : DATE : 16/4/20

ಕನ್ನಡಪ್ರಭ
ಸಂಪಾದಕೀಯ

# ಕೆಪಿಎಸ್ಸಿಗೆ ಈಗಲೂ ಕಾಯಕಲ್ಪ ತರದಿದ್ದರೆ ಬಹುದೊಡ್ಡ ಲೋಪ

ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) ಮತ್ತೆ ಸುದ್ದಿಯಲ್ಲಿದೆ. ಈ ಬಾರಿಯೂ ಅದು ಎಂದಿನಂತೆ ಋಣಾತ್ಮಕ ಕಾರಣಗಳಿಗಾಗಿಯೇ ಸುದ್ದಿಯಲ್ಲಿದೆ. ಒಂದೆಡೆ, ಕೇಂದ್ರ ಲೋಕಸೇವಾ ಆಯೋಗ (ಯುಪಿಎಸ್‌ಸಿ) ಐಎಎಸ್ ಮುಂತಾದ ಹುದ್ದೆಗಳಿಗೆ ಪರೀಕ್ಷೆ ನಿಗದಿಪಡಿಸಿದ ಸಮಯದಲ್ಲೇ ಇತ್ತ ಕೆಪಿಎಸ್‌ಸಿ ಕೂಡ ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳಿಗೆ ಪರೀಕ್ಷೆ ನಿಗದಿಪಡಿಸಿ ಎಡವಟ್ಟು ಮಾಡಿಕೊಂಡಿದೆ. ಇದರಿಂದ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಉನ್ನತ ಹುದ್ದೆಗಳಿಗೆ ನೇಮಕಗೊಳ್ಳಲು ಸ್ಪರ್ಧಾತ್ಮಕ ಪರೀಕ್ಷೆ ಬರೆಯುವ ಸಾವಿರಾರು ಅಭ್ಯರ್ಥಿಗಳು ಇಕ್ಕಟ್ಟಿಗೆ ಸಿಲುಕಿದ್ದಾರೆ. ಮತ್ತೊಂದೆಡೆ, ಪ್ರತಿ ನೇಮಕಾತಿಯಲ್ಲೂ ಗೊಂದಲ ಸೃಷ್ಟಿಸುವ, ಭ್ರಷ್ಟಾಚಾರಗಳ ಕೂಪವೆಂದು ಹೆಸರು ಪಡೆದಿರುವ ಹಾಗೂ ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇಮಕಾತಿಯಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳದ ಕೆಪಿಎಸ್ಸಿಯನ್ನು ಮುಚ್ಚುವುದೇ ಲೇಸು ಎಂದು ರಾಜ್ಯ ಹೈಕೋರ್ಟ್ ಮತ್ತೊಮ್ಮೆ ಕಟುವಾದ ಅಭಿಪ್ರಾಯ ವ್ಯಕ್ತಪಡಿಸಿದೆ. ಇಷ್ಟಾದರೂ ಎಂದಿನಂತೆ ಕೆಪಿಎಸ್‌ಸಿ ತನ್ನ ನಿಲುವನ್ನು ಸಮರ್ಥಿಸಿಕೊಳ್ಳುತ್ತಿದೆ. ಪರೀಕ್ಷೆ ಹಾಗೂ ನೇಮಕಾತಿಗಳಲ್ಲಿ ಕೆಪಿಎಸ್‌ಸಿ ಎಡವಟ್ಟು ಮಾಡುವುದು, ಅಭ್ಯರ್ಥಿಗಳು ಪ್ರತಿಭಟನೆ ನಡೆಸುವುದು ಅಥವಾ ಕೋರ್ಟ್‌ಗೆ ಹೋಗುವುದು, ಕೋರ್ಟ್ ಕೆಪಿಎಸ್‌ಸಿಗೆ ಛೀಮಾರಿ ಹಾಕಿ ಈ ಸಂಸ್ಥೆಯನ್ನೇ ಮುಚ್ಚಿಬಿಡಿ ಎನ್ನುವುದು ಮತ್ತು ಸರ್ಕಾರ ಎಲ್ಲ ಗೊಂದಲಗಳನ್ನು ಬಗೆಹರಿಸುತ್ತೇವೆ ಎಂದು ಹೇಳುವುದು ಇದು ಎಷ್ಟನೇ ಬಾರಿ ಎಂದು ಯಾರೂ ಲೆಕ್ಕವಿಟ್ಟಿರಲು ಸಾಧ್ಯವಿಲ್ಲ! ರಾಜ್ಯ ಸರ್ಕಾರದ ವಿವಿಧ ಇಲಾಖೆಗಳ ಉನ್ನತ ಹುದ್ದೆಗಳಿಗೆ ನೇಮಕಾತಿ ನಡೆಸುವ ಗುರುತರ ಜವಾಬ್ದಾರಿ ಹೊಂದಿರುವ ಕೆಪಿಎಸ್‌ಸಿಯ ವಿಷಯದಲ್ಲಿ ಏಕೆ ಇಂತಹದ್ದೊಂದು ನಿರಂತರ ಲೋಪ ನಡೆಯುತ್ತಿದೆ? ಏಕೆ ಇದನ್ನು ಸರಿಪಡಿಸಲು ಯಾವ ಸರ್ಕಾರಗಳೂ ಪ್ರಯತ್ನ ನಡೆಸುವುದಿಲ್ಲ ಎಂಬುದು ನಿಜಕ್ಕೂ ಯಕ್ಷಪ್ರಶ್ನೆ.

> **69 ವರ್ಷದಲ್ಲಿ ಯಾವುದೇ ವ್ಯವಸ್ಥೆ ಪೂರ್ಣ ವಿಕಸನಗೊಂಡು ಪ್ರೌಢಾವಸ್ಥೆಗೆ ತಲುಪಬೇಕು. ಆದರೆ ಕೆಪಿಎಸ್‌ಸಿ ಮಾತ್ರ ವರ್ಷದಿಂದ ವರ್ಷಕ್ಕೆ ಅಧ್ವಾನಗೊಳ್ಳುತ್ತಲೇ ಸಾಗಿದೆ.**

ಯುಪಿಎಸ್‌ಸಿ ಅಡಿಯಲ್ಲೇ ಕೆಪಿಎಸ್‌ಸಿ ಕಾರ್ಯನಿರ್ವಹಿಸುತ್ತದೆ. ಆದರೆ, ಯುಪಿಎಸ್‌ಸಿ ನಡೆಸುವ ಪರೀಕ್ಷೆ ಮತ್ತು ನೇಮಕಾತಿ ವಿಧಾನಗಳಿಗೂ ಕೆಪಿಎಸ್‌ಸಿಯ ಪರೀಕ್ಷೆ ಮತ್ತು ನೇಮಕಾತಿ ವಿಧಾನಗಳಿಗೂ ಬಹಳಷ್ಟು ವ್ಯತ್ಯಾಸಗಳಿವೆ. ಯುಪಿಎಸ್‌ಸಿಯಲ್ಲಿ ಸಾಮಾನ್ಯವಾಗಿ ಯಾವಾಗಲೂ ಗೊಂದಲ, ಅಕ್ರಮ ಹಾಗೂ ಭ್ರಷ್ಟಾಚಾರಗಳ ದೂರು ಕೇಳಿಸುವುದಿಲ್ಲ. ಆದರೆ, ಕೆಪಿಎಸ್‌ಸಿಯಲ್ಲಿ ಈ ದೂರು ಕೇಳಿಸದ ವರ್ಷವೇ ಇಲ್ಲ. ಕೇಂದ್ರ ಸರ್ಕಾರಿ ನೇಮಕಾತಿಗಳನ್ನು ಯಶಸ್ವಿಯಾಗಿ ಹಾಗೂ ದಕ್ಷತೆಯಿಂದ ನಡೆಸಲು ಯುಪಿಎಸ್‌ಸಿಗೆ ಸಾಧ್ಯವಾಗುತ್ತದೆ ಎಂದಾದರೆ ರಾಜ್ಯ ಸರ್ಕಾರಿ ನೇಮಕಾತಿಗಳನ್ನು ಯಶಸ್ವಿಯಾಗಿ ಹಾಗೂ ದಕ್ಷವಾಗಿ ನಡೆಸಲು ಕೆಪಿಎಸ್‌ಸಿಗೆ ಏಕೆ ಸಾಧ್ಯವಿಲ್ಲ? ಇದಕ್ಕಿರುವ ಏಕೈಕ ಕಾರಣ - ಕೆಪಿಎಸ್‌ಸಿಯ ನೇಮಕಾತಿ ವಿಧಾನಗಳಲ್ಲಿ ಭ್ರಷ್ಟಾಚಾರಕ್ಕೆ ಇರುವ ಅವಕಾಶ. ಇದನ್ನು ಸರಿಪಡಿಸುವ ಹೊಣೆ ರಾಜ್ಯ ಸರ್ಕಾರದ ಮೇಲಿದೆ.

ಕೆಪಿಎಸ್‌ಸಿ ಸ್ಥಾಪನೆಯಾಗಿ 69 ವರ್ಷಗಳಾದವು. ಯಾವುದೇ ವ್ಯವಸ್ಥೆಯು ವರ್ಷದಿಂದ ವರ್ಷಕ್ಕೆ ತನ್ನ ಲೋಪಗಳನ್ನು ಸರಿಪಡಿಸಿಕೊಳ್ಳುತ್ತಾ ಹೋಗಿ ಎರಡು-ಮೂರು ದಶಕದಲ್ಲಿ ಸಮರ್ಥ ವ್ಯವಸ್ಥೆಯಾಗಿ ರೂಪುಗೊಳ್ಳಬೇಕು. ಚುನಾವಣಾ ಆಯೋಗದಂತಹ ಉದಾಹರಣೆಗಳು ನಮ್ಮ ಮುಂದಿವೆ. ಆದರೆ, ಕೆಪಿಎಸ್‌ಸಿ ಮಾತ್ರ ವರ್ಷದಿಂದ ವರ್ಷಕ್ಕೆ ಅಧ್ವಾನದತ್ತಲೇ ಸಾಗುತ್ತಿದೆ. ಹೀಗಾಗಿಯೇ ಕೆಲ ವರ್ಷಗಳ ಹಿಂದೆ ನೇಮಕಗೊಂಡಿದ್ದ ಯುಪಿಎಸ್‌ಸಿಯ ಮಾಜಿ ಮುಖ್ಯಸ್ಥ ಪಿ.ಸಿ.ಹೋಟಾ ಅವರ ಸಮಿತಿಯು ಕೆಪಿಎಸ್‌ಸಿಯನ್ನು ಯುಪಿಎಸ್‌ಸಿ ಮಾದರಿಯಲ್ಲಿ ಬದಲಾಯಿಸಲು ಸಾಕಷ್ಟು ಶಿಫಾರಸುಗಳನ್ನು ಮಾಡಿದೆ. ಆದರೆ, ಸರ್ಕಾರ ಅವುಗಳನ್ನು ನಿರಂತರವಾಗಿ ಕಡೆಗಣಿಸುತ್ತಾ ಬಂದಿದೆ. ಸರ್ಕಾರಿ ವ್ಯವಸ್ಥೆ ದಕ್ಷವಾಗಿ ಮತ್ತು ಪ್ರಾಮಾಣಿಕವಾಗಿ ನಡೆಯಬೇಕು ಅಂದರೆ ನೌಕರಶಾಹಿ ಬಹಳ ಮುಖ್ಯ. ಅವರ ನೇಮಕದಲ್ಲೇ ಲೋಪವಿದ್ದರೆ ವ್ಯವಸ್ಥೆ ಹೇಗೆ ಚೆನ್ನಾಗಿ ನಡೆದೀತು? ಸರ್ಕಾರ ಈಗಲಾದರೂ ಎಚ್ಚೆತ್ತುಕೊಂಡು, ನೆಪ ಹೇಳದೆ, ವಿಳಂಬ ಮಾಡದೆ, ಕೆಪಿಎಸ್‌ಸಿಗೆ ನಿಜವಾದ ಕಾಯಕಲ್ಪ ನೀಡದಿದ್ದರೆ ಬಹುದೊಡ್ಡ ತಪ್ಪು ಮಾಡಿದಂತಾಗುತ್ತದೆ. ಕೆಪಿಎಸ್‌ಸಿಯಲ್ಲಿರುವ ಸಮಸ್ಯೆಯೇನು ಎಂಬುದು ಸರ್ಕಾರಕ್ಕೆ ಸ್ಪಷ್ಟವಾಗಿ ಗೊತ್ತು. ಅದನ್ನು ಸರಿಪಡಿಸಲು ಬೇಕಿರುವುದು ಇಚ್ಛಾಶಕ್ತಿ ಮಾತ್ರ.